SC 142/2022
CW-1
PW-1

**<u>ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಿದ ದಿನಾಂಕಃ 28.10.2025</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

10. ಪೋಲಿಸರು ಆ ದಿನ ಲಾಡ್ಜ್ ಗೆ ಬಂದಾಗ ಮು.ಮಾ 1 ರಿಂದ 8 ರ ವಸ್ತುವಿನ ಜೊತೆ ಒಂದು ಶರ್ಟನ್ನು ಸಹ ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ ಶರ್ಟನ್ನು ನೋಡಿದರೆ ಗುರುತಿಸಬಲ್ಲೆ.

(ಈ ಸಮಯದಲ್ಲಿ ಸೀಲುಮಾಡಲಾಗಿರುವ ಈ ಕೇಸಿನ ಮುದ್ದೆಮಾಲಿನ ಪ್ರತ್ಯೇಕ ಗಂಟನ್ನು, ಅದರ ಮೇಲಿರುವ ಸೀಲು ಸರಿ ಇದೆ ಎನ್ನುವುದನ್ನು ದೃಢಪಡಿಸಿಕೊಂಡು, ಎದುರುದಾರರ ವಕೀಲರ ಸಮಕ್ಷಮ ನ್ಯಾಯಾಲಯದ ಅನುಮತಿಯ ಮೇರೆಗೆ, ಬಿಚ್ಚಿ ತೆರೆದು ಸಾಕ್ಷಿಗೆ ತೋರಿಸಲಾಗಿರುತ್ತದೆ)

ಸದರಿ ಶರ್ಟನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದನ್ನು ಗುರುತಿಸಿದ ಮೇರೆಗೆ ಸದರಿ ವಸ್ತುವನ್ನು ನಿಪಿ-9 ಎಂದು ಗುರುತಿಸಲಾಯಿತು. ಯಾವುದೇ ವ್ಯಕ್ತಿಗಳು ನಮ್ಮ ಲಾಡ್ಜ್‌ಗೆ ಬಂದಂತಹ ಸಮಯದಲ್ಲಿ ನಾವು ಅವರ ಹತ್ತಿರ ಅವರ ಹೆಸರು, ವಿಳಾಸ, ಅವರ ಮೊಬೈಲ್ ನಂಬರ್ ಹಾಗೂ ಆದಾರ್ ಕಾರ್ಡನ್ನು ಪಡೆದುಕೊಳ್ಳುತ್ತೇವೆ. 2 ನೇ ಆರೋಪಿಯು ನಮ್ಮ ಲಾಡ್ಜ್‌ಗೆ ಬಂದಂತಹ ಸಮಯದಲ್ಲಿ ಆಕೆಯ ಹತ್ತಿರ ಆಕೆಯ ಆದಾರ್ ಕಾರ್ಡ ಹಾಗೂ 3 ನೇ ಆರೋಪಿಯಾದ ದಿಲೀಪ್ ಕುಮಾರ ನ ಹತ್ತಿರ ಆತನ ವೋಟರ್ ಐಡಿ ಯನ್ನು ತೆಗೆದುಕೊಂಡಿರುತ್ತೇನೆ. ಸದರಿ ದಾಖಲಾತಿಗಳನ್ನು ಸಾಕ್ಷಿಯು ತನಿಖಾಧಿಕಾರಿಗಳಿಗೆ ನೀಡಿದ್ದು, ಅವುಗಳನ್ನು ತನಿಖಾಧಿಕಾರಿಯು ಶೀಲ್ಡ್ ಕವರ್ ನಲ್ಲಿ ಹಾಕಿ ನಿಪಿ-3 ರಂತೆ ಅಮಾನತುಪಡಿಸಿಕೊಂಡಿರುತ್ತಾರೆ. 3 ನೇ ಆರೋಪಿಯ ವೋಟರ್ ಐಡಿಯನ್ನು ನಿಪಿ-5 ಎಂದು, 2 ನೇ ಆರೋಪಿಯ ಆದಾರ್ ಕಾರ್ಡನ ದೃಡೀಕೃತ ನಕಲನ್ನು ನಿಪಿ-6 ಎಂದು ಗುರುತಿಸಲಾಯಿತು.

11. ನಾವು ನಮ್ಮ ಲಾಡ್ಜ್‌ಗೆ ಅಳವಡಿಸಿದ್ದ ಸಿಸಿಟಿವಿಯ ಡಿವಿಆರ್ ನ ಚಿತ್ರಣಗಳನ್ನು ನೋಡಲಾಗಿ ಆರೋಪಿತರು ರೂಮಿಗೆ ನೇರವಾಗಿ ಅಳವಡಿಸಿದ್ದ ಸಿಸಿ ಕ್ಯಾಮರಾದಲ್ಲಿ ಕಂಡುಬಂದಿದ್ದು, ಅವರುಗಳಲ್ಲಿ 3 ನೇ ಆರೋಪಿಯು ಮುಖಕ್ಕೆ ಮುಖ ಕವಚ ಧರಿಸಿದ್ದು ಕಂಡುಬರುತ್ತದೆ. ನಂತರ ಆರೋಪಿತರು ಸದರಿ ಕ್ಯಾಮರಾದ ದಿಕ್ಕನ್ನು ಬದಲಿಸಲಿಸಿರುತ್ತಾರೆ. ಸದರಿ ಸಿಸಿ ಕ್ಯಾಮರಾದ ವಿಡಿಯೋದ ತುಣುಕುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಗೆ

ನ್ಯಾಯಾಲಯದ ಸುಪರ್ದಿಯಲ್ಲಿದ್ದ ಪೆನ್ ಡ್ರೈವ್ ನಲ್ಲಿರುವ ವಿಡಿಯೋಗಳನ್ನು ತೋರಿಸಲಾಗಿ ಲಾಡ್ಜಿನ 3 ನೇ ಕ್ಯಾಮರಾದ ವಿಡಿಯೋ ತುಣುಕಿನಲ್ಲಿನ 49 ನಿಮಿಷ 13 ಸೆಕೆಂಡನ (06:49:13 AM ಎಂಬಂತೆ ಕಂಡುಬರುವ) 1 ನೇ ಆರೋಪಿ ಲಕ್ಷ್ಮಣ ಲಾಡ್ಜಿನ ರೂಮಿನ ಒಳಗಡೆ ಹೋಗಿ ಆಚೆ ಬರುತ್ತಿರುವುದು ಕಂಡುಬರುತ್ತದೆ. ಸದರಿ ಪೆನ್ ಡ್ರೈವನ್ನು ಮು.ಮಾ 10 ಎಂದು ಗುರುತಿಸಲಾಯಿತು. ಸಂಜೆ 06.45 ರಿಂದ 07.00 ಗಂಟೆ ಸಮಯಕ್ಕೆ ಭಯಂಕರ ಕೂಗಾಡುವ ಶಬ್ದ ಕೇಳಿದ್ದು, ನಾನು ಲಾಡ್ಜಿನ ರೂಮಿನ ಹತ್ತಿರ ಹೋಗುವ ಸಂದರ್ಭದಲ್ಲಿ ಲಕ್ಷ್ಮಣ ಹಾಗೂ ಸುಶ್ಮಿತಾ ರವರು ಮೆಟ್ಟಿಲ ಹತ್ತಿರ ಬರುವುದನ್ನು ನಾನು ನೋಡಿದ್ದು, ನಂತರ ರೂಮಿಗೆ ಹೋಗಿ ನೋಡಲಾಗಿ ಸದರಿ ರೂಮು ರಕ್ತಮಯವಾಗಿದ್ದರಿಂದ ರೂಮಿನ ಬಾಗಿಲನ್ನು ಹಾಕಿ ಪೋಲಿಸರಿಗೆ ವಿಚಾರವನ್ನು ತಿಳಿಸಿರುತ್ತೇನೆ. ಸಾಕ್ಷಿಗೆ ಸದರಿ ರೂಮಿನಲ್ಲಿ ತೆಗೆದಂತಹ ಎರಡು ಛಾಯಾಚಿತ್ರಗಳನ್ನು ತೋರಿಸಲಾಗಿ ಸಾಕ್ಷಿಯು ತಾವು ಮೇಲೆ ಹೇಳಿದಂತಹ ಘಟನೆ ಆದ ಸ್ಥಳದ ಚಿತ್ರಣವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಎರಡು ಛಾಯಾಚಿತ್ರಗಳನ್ನು ಒಟ್ಟಾಗಿ ನಿಪಿ-7 ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಸತ್ತು ಬಿದ್ದಂತಹ ವ್ಯಕ್ತಿಯನ್ನು ನಾನು ನೋಡಲಿಲ್ಲ, ಕಾರಣ ನನಗೆ ರಕ್ತವನ್ನು ನೋಡಿದಾಕ್ಷಣ ಭಯಗೊಂಡಿದ್ದೆ. ನಂತರ ಸದರಿ ಕೊಲೆಯು ಯಾವ ಕಾರಣಕ್ಕಾಗಿ ಆಯಿತು ಎಂದು ತಿಳಿದುಕೊಳ್ಳಲಿಲ್ಲ, ಆದರೆ ಪೋಲಿಸರ ಮುಖಾಂತರ ಅದು ಹಣದ ವಿಚಾರವಾಗಿ ನಡೆದ ಘಟನೆ ಎಂದು ತಿಳಿಯಿತು. ಸಾಕ್ಷಿಯು ತಮ್ಮ ಲಾಡ್ಜಿಗೆ ಬಂದಿದ್ದಂತಹ ಮೂರು ಜನ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಘಟನೆ ನಡೆದ ಸುಮಾರು 15 ದಿವಸದ ನಂತರ ಅರಕಲಗೂಡಿನ ಪೋಲಿಸ ವೃತ್ತ ನಿರೀಕ್ಷದ ಕಚೇರಿಗೆ ಕರೆಸಿದ್ದರು. ನಾನು ಠಾಣೆಗೆ ಹೋಗಿ ನೋಡಿದಾಗ ಮೂರು ಜನ ಆರೋಪಿತರು ಠಾಣೆಯಲ್ಲಿ ಹಾಜರಿದ್ದರು.

**<u>ಪಾಟೀಸವಾಲುಃ 1 ಹಾಗೂ 3 ನೇ ಆರೋಪಿಯ ಪರ ಶ್ರೀ ಎಸ್.ಎಸ್.ಹೆಚ್ ವಕೀಲರಿಂದಃ</u>**

12. ನಾನು ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಸಹಿ ಮಾಡುವಾಗ ಇಂಗ್ಲೀಷನಲ್ಲಿ ಮಾಡುತ್ತೇನೆ. ನನ್ನ ಮನೆ ಲಾಡ್ಜಿನ ಕೆಳಗಡೆ ಇರುತ್ತದೆ. ಮೊದಲನೆ ಅಂತಸ್ತಿನಲ್ಲಿ ಲಾಡ್ಜ್ ಇರುತ್ತದೆ. ನನ್ನ ಮನೆಯ ಮುಂದೆ ಒಂದು ಅಂಗಡಿ ಇರುತ್ತದೆ. ನಮ್ಮ ಲಾಡ್ಜ್ ಕೊಣನೂರಿನ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದ

ಎದುರು ಇರುತ್ತದೆ, ಮದ್ಯ ಒಂದು ಮುಖ್ಯ ರಸ್ತೆ ಇರುತ್ತದೆ. ನಮ್ಮ ಲಾಡ್ಜಗೂ ಬಸ್ ನಿಲ್ದಾಣಕ್ಕೂ ಸುಮಾರು 25 ಮೀಟರ್ ಅಂತರವಿರುತ್ತದೆ. ಲಾಡ್ಜನ್ನು ಪ್ರಾರಂಬಿಸುವುದಕ್ಕಿಂತ ಮೊದಲು ಅದು ವಾಸದ ಮನೆಯಾಗಿತ್ತು. ನಂತರ ಮನೆ ಸೋರುತ್ತಿದ್ದರಿಂದ ಮೊದಲನೆ ಅಂತಸ್ತಿನಲ್ಲಿ ಲಾಡ್ಜ ಆಗಿ ಪರಿವರ್ತಿಸಿದ್ದೇವೆ.

13. 1963 ನೇ ಇಸವಿಯಿಂದ ಸದರಿ ಮನೆಯಲ್ಲಿ ವಾಸವಿದ್ದೇವೆ. ನಮ್ಮ ಮನೆಯಲ್ಲಿ ಘಟನಾ ಸಮಯಕ್ಕೆ ನಾನು, ನನ್ನ ಹೆಂಡತಿ ನಾಗಲಕ್ಷ್ಮಿ, ನನ್ನ ಮಗಳಾದ ಭಾರ್ಗವಿ ಹಾಗೂ ನನ್ನ ಮೊಮ್ಮಗಳು ವಾಸವಿದ್ದೆವು. ಸದರಿ ಬಿ.ಎಸ್.ಸಿ ಲಾಡ್ಜನ್ನು 2012 ರಿಂದ ಪ್ರಾರಂಬಿಸಿದೆವು. ಆ ಸಂದರ್ಭದಲ್ಲಿ ನಮ್ಮ ಲಾಡ್ಜನಲ್ಲಿ ಎರಡು ಬೆಡ್ ರೂಮಿನ ನಾಲ್ಕು ರೂಮುಗಳು ಹಾಗೂ ಒಂದು ಬೆಡ್ ರೂಮಿನ ಐದು ರೂಮುಗಳು ಇದ್ದವು. ಲಾಡ್ಜನ್ನು ಪ್ರಾರಂಬಿಸಲು ಸಂಬಂದಪಟ್ಟ ಅಧಿಕಾರಿಗಳಿಂದ ಲೈಸನ್ಸನ್ನು ಪಡೆದಿರುತ್ತೇನೆ. ಸದರಿ ಲೈಸನ್ಸನ್ನು ಪೋಲಿಸರಿಗೆ ನೀಡಿರುತ್ತೇನೆ. ಸದರಿ ಲೈಸನ್ಸನ್ನು ಪೋಲಿಸರಿಗೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

14. ನಮ್ಮ ಲಾಡ್ಜನ ಬಲಭಾಗದಲ್ಲಿ ಒಂದು ಕಾಂಪ್ಲೆಕ್ಸ ಇರುತ್ತದೆ. ಅದರ ಹೆಸರು ನನಗೆ ಸರಿಯಾಗಿ ನೆನಪಿಗೆ ಬರುತ್ತಿಲ್ಲ. ಎಡಭಾಗದ ಜಾಗ ನನ್ನ ಅಣ್ಣನಿಗೆ ಸೇರಿದ್ದು ಅದನ್ನು ಈರಪ್ಪ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ. ನಮ್ಮ ಲಾಡ್ಜನ ಹಿಂಭಾಗಕ್ಕೆ ಸರ್ಕಾರಿ ಆಸ್ಪತ್ರೆಯ ವಸತಿಗೃಹಗಳು ಇರುತ್ತವೆ. ಲಾಡ್ಜನ ಮುಂಭಾಗ ಸಾರ್ವಜನಿಕರು ಹಾಗೂ ವಾಹನಗಳ ಓಡಾಟವಿರುತ್ತದೆ. ನಮ್ಮ ಲಾಡ್ಜಗೆ ಮೂರು ಸಿಸಿ ಕ್ಯಾಮರಾಗಳನ್ನು ಅಳವಡಿಸಿದ್ದು, ಅದರಲ್ಲಿ ಮೂರನೇ ಕ್ಯಾಮರಾ ಕೆಲಸ ಮಾಡುತ್ತಿತ್ತು. ಸದರಿ ಕ್ಯಾಮರಾವನ್ನು ಅಳವಡಿಸಿದ್ದ ತಂತ್ರಜ್ಞ ಯಾರು ಎಂದು ನೆನಪಿಲ್ಲ. ಸದರಿ ಸಿಸಿ ಕ್ಯಾಮರಾದಲ್ಲಿ ಎಡ, ಬಲ ಹಾಗೂ ಎದುರು ಬರುವಂತಹ ಎಲ್ಲರೂ ಕಾಣಸಿಗುತ್ತಾರೆ. ನಾನು ನಮ್ಮ ಲಾಡ್ಜನಲ್ಲಿ ಯಾವುದೇ ಕೆಸಲಗಾರರನ್ನು ನೇಮಿಸಿಕೊಂಡಿಲ್ಲ. ಲಾಡ್ಜನ ರೂಮುಗಳನ್ನು ಸ್ವಚ್ಚಗೊಳಿಸುವ ಸಂದರ್ಭದಲ್ಲಿ ಕೆಂಪಣ್ಣ, ವಾಸು ಹಾಗೂ ಮಣಿ ಎಂಬುವವರಿಗೆ ತಿಳಿಸುತ್ತಿದ್ದೆ. ಸದರಿಯವರು ಲಾಡ್ಜನಲ್ಲಿ ವಾಸವಿರಲಿಲ್ಲ. ನಾನು ಕರೆದಾಗ ಬಂದು ಕೆಲಸ ಮಾಡಿ ಹೊರಡುತ್ತಿದ್ದರು. ಅವರ ಕೆಲಸಕ್ಕೆ ಕೂಲಿಯ ರೂಪದಲ್ಲಿ ಹಣ ನೀಡುತ್ತಿದ್ದೆ. ಈ ವಿಚಾರವನ್ನು ನಾನು ಯಾವುದೇ ಪುಸ್ತಕದಲ್ಲಿ ಬರೆದಿಟ್ಟಿಲ್ಲ. 2012 ರಲ್ಲಿ

ಲಾಡ್ಜನ್ನು ಪ್ರಾರಂಬಿಸಿದ ನಂತರ ಪ್ರವೀಣ ಎಂಬುವನನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದು, ಆತ ಮೂರು ವರ್ಷದ ನಂತರ ಸ್ವಂತ ವ್ಯಾಪಾರಕ್ಕೆಂದು ಬಿಟ್ಟು ಹೋಗಿದ್ದು, ಆನಂತರ ಬೇರೆ ಯಾರನ್ನು ನೇಮಿಸಿಕೊಂಡಿಲ್ಲ. ನಮ್ಮ ಮನೆಯ ಮುಂಭಾಗ ಅಂಗಡಿಯಿದ್ದರಿಂದ ಸಾಮಾನ್ಯವಾಗಿ ಮನೆ ಸಾಮಾನು ಖರೀದಿಸಲು ಜನ ಬರುತ್ತಿದ್ದಿದುಂಟು. ಅದನ್ನು ಸೆರೆ ಹಿಡಿಯಲು ಯಾವುದೇ ಸಿಸಿ ಕ್ಯಾಮಾರಾವನ್ನು ಅಳವಡಿಸಿಲ್ಲ. ನಮ್ಮ ವಾಸದ ಮನೆಯ ಮುಂಭಾಗ ಅಳವಡಿಸಿದ್ದಂತಹ ಸಿಸಿ ಕ್ಯಾಮರಾ ಕೆಲಸ ಮಾಡುತ್ತಿರಲಿಲ್ಲ. ಲಾಡ್ಜನ ಒಳಗಡೆ ಎರಡು ಸಿಸಿ ಕ್ಯಾಮರಾ ಇದ್ದು, ಒಂದು ಮೆಟ್ಟಿಲುಗಳ ಮುಖಾಂತರ ಒಳ ಹೋಗುವ ಜಾಗದಲ್ಲಿ ಮತ್ತೊಂದು ಕ್ಯಾಮರಾವನ್ನು ಎಲ್ಲಾ ರೂಮುಗಳು ಕಾಣುವಂತೆ ಅಳವಡಿಸಲಾಗಿರುತ್ತದೆ. ನಮ್ಮ ಲಾಡ್ಜಗೆ ಗ್ರಾಹಕರು ಬಹಳಷ್ಟು ಜನ ಹೋಗಿ ಬಂದು ಮಾಡುತ್ತಿದ್ದರೂ ಸಹ ಎಲ್ಲಾ ಸಿಸಿ ಕ್ಯಾಮರಾಗಳನ್ನು ರಿಪೇರಿ ಮಾಡಿಸಿರಲಿಲ್ಲ, ಆದರೆ ಒಂದು ಸಿಸಿ ಕ್ಯಾಮರಾ ಮಾತ್ರ ಕೆಲಸ ಮಾಡುತ್ತಿತ್ತು.

15. ನಮ್ಮ ಲಾಡ್ಜ ಬೇಟಿ ನೀಡಿರುವ ಎಲ್ಲಾ ಗ್ರಾಹಕರ ಹೆಸರು, ವಿಳಾಸ, ಸಂಬಂದಪಟ್ಟ ದಾಖಲೆಗಳು ಹಾಗೂ ಮೊಬೈಲ ನಂಬರಗಳನ್ನು ತೆಗೆದುಕೊಂಡಿದ್ದೇವೆ. 2012 ರಿಂದ ಘಟನೆ ನಡೆಯುವ ತನಕ ಸುಮಾರು 4-5 ರಿಜಿಸ್ಟರಗಳನ್ನು ಬಳಸಿದ್ದೇವೆ. ಸದರಿ ರಿಜಿಸ್ಟರಗಳ ಎಲ್ಲಾ ದಾಖಲೆಗಳನ್ನು ನಾನು ಪೋಲಿಸರಿಗೆ ನೀಡಿಲ್ಲ. ಸಾಕ್ಷಿಯು ಘಟನೆ ಸಮಯದಲ್ಲಿ ಆದಂತಹ ಮತ್ತು ಅದಕ್ಕೆ ಸಂಬಂದಪಟ್ಟಂತಹ ರಿಜಿಸ್ಟರ ದಾಖಲೆಗಳನ್ನು ನೀಡಿರುತ್ತೇನೆ. ಸದರಿ ದಾಖಲೆಗಳನ್ನು ನಾನೇ ಬರೆದುಕೊಂಡಿದ್ದೆ. ಘಟನೆ ಸಂದರ್ಬದಲ್ಲಿ ಬರೆಯಲಾದಂತಹ ನಿಪಿ-4 ರ ರಿಜಿಸ್ಟರನ್ನು ಘಟನೆಗೂ ಆರು ತಿಂಗಳ ಹಿಂದಿನಿಂದ ಬಳಸಲು ಪ್ರಾರಂಭಸಿದ್ದೆವು. ನಾವು ಲಾಡ್ಜಗೆ ಸಂಬಂದಪಟ್ಟ ಯಾವುದೇ ರಿಜಿಸ್ಟರನ್ನು ಬಳಸುತ್ತಿರಲಿಲ್ಲ ಹಾಗೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

16. ನಿಪಿ-4 ರ ರಿಜಿಸ್ಟರನ್ನು ತನಿಖಾಧಿಕಾರಿಗಳಿಗೆ ತನಿಖೆ ಸಮಯದಲ್ಲಿ ನೀಡಿಲ್ಲ, ಬದಲಾಗಿ ನಂತರದಲ್ಲಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಗ್ರಾಹಕರ ಗುರುತಿನ ಚೀಟಿಯನ್ನು ಬಿಟ್ಟು ಬೇರೆ ಯಾವ ದಾಖಲೆಗಳನ್ನು ಪಡೆಯುವುದಿಲ್ಲ. ಆರೋಪಿತರ ಗುರುತಿನ ಚೀಟಿಗಳನ್ನು ಹೊರತುಪಡಿಸಿ, ಬೇರೆ ಯಾವ ಗ್ರಾಹಕರ ದಾಖಲಾತಿಗಳನ್ನು ತನಿಖಾಧಿಕಾರಿಗಳಿಗೆ ಹಾಜರುಪಡಿಸಿಲ್ಲ. ನಿಪಿ-4 ರ

ರಿಜಿಸ್ಟರನ್ನು ದಿಃ 08.02.2021 ರಿಂದ ಪ್ರಾರಂಭವಾಗಿರುತ್ತದೆ ಎಂದರೆ ಸರಿ. ಸದರಿ ರಿಜಿಸ್ಟರನಲ್ಲಿ ನಮ್ಮ ಲಾಡ್ಜನ ಹೆಸರು ನಮೂದಾಗಿಲ್ಲ ಎಂದರೆ ಸರಿ. ನಿಪಿ-4 ರ ರಿಜಿಸ್ಟರನಲ್ಲಿ ಕೊನೆಯ ದಾಖಲಾತಿ ದಿಃ 18.01.2021 ರಲ್ಲಿ ಆಗಿರುತ್ತದೆ. ನಿಪಿ-4 ರ ದಾಖಲೆಯ ಪ್ರಕಾರ 2 ನೇ ಆರೋಪಿ ದಿಃ 18.01.2021 ರ ಸಂಜೆ 04.30 ಸಮಯಕ್ಕೆ ಬಂದಿರುವುದು ನಮೂದಾಗಿರುತ್ತದೆ ಎಂದರೆ ಸರಿ. ದಿಃ 18.01.2021 ರ ಸಂಜೆ 04.45 ಸಮಯಕ್ಕೆ 3 ನೇ ಆರೋಪಿ ಬಂದಿರುವುದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ-4 ರ ದಾಖಲೆಯನ್ನು ಸೃಷ್ಟಿಮಾಡಿಕೊಂಡು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸದರಿ ಆರೋಪಿತರು ರಿಜಿಸ್ಟರನಲ್ಲಿ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತರ ಸಹಿಗಳನ್ನು ನಿಪಿ-4 ರಿಜಿಸ್ಟರನಲ್ಲಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಈ ಸಂದರ್ಭದಲ್ಲಿ ನ್ಯಾಯಾಲಯದ ಕಲಾಪಗಳು ಮುಗಿಯುವ ಹಂತಕ್ಕೆ ಬಂದಿದ್ದು, ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಸಮಕ್ಷಮ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಹಾಸನ.